

# ಧಾರಾವಾಹಿಯ ನಾಯಕ 'ಕಥೆ'

**ವಿನೋದ್ ಜಿ.**

ಉದಯದ 'ಕಾವೇರಿ' ನಿರ್ದೇಶಕ

★ *'ಕಾವೇರಿ' ಹಳೆಯ ಧಾರಾವಾಹಿಯ ಹೆಸರು ಅಲ್ವಾ?*

ಹೆಸರು ಅಷ್ಟೇ ಹಳೆಯದು. ಇಲ್ಲಿ ಪ್ರಮುಖ ಪಾತ್ರದ ಹೆಸರೂ 'ಕಾವೇರಿ' ಕಥೆಗೆ ತಕ್ಕ ಶಿರ್ಷಿಕೆ ಕೊಡಬೇಕಿತ್ತು. 'ಮಹಾನದಿ' 'ಜೀವನದಿ' ಎಂಬ ಹೆಸರುಗಳು ನಮ್ಮ ಯೋಚನೆಗೆ ಬಂದಿದ್ದವು. ನಾಯಕಿ ಹೆಸರೂ 'ಕಾವೇರಿ' ಆಗಿದ್ದರಿಂದ ಅದನ್ನು ಇಟ್ಟಿದ್ದೇವೆ. ಯಾರ ಅನುಕರಣೆಯನ್ನೂ ಮಾಡಿಲ್ಲ. ಹೊಸ ರೀತಿಯ ಚಿಂತನೆಯನ್ನು ಕಥೆಯ ರೂಪದಲ್ಲಿ ಮಾಡಲಾಗಿದೆ. ಕಥೆಯ ಮೂಲಕ ಧಾರಾವಾಹಿ ಹಿತವಾಗುತ್ತದೆ ಎನ್ನುವುದು ನನ್ನ ಯೋಚನೆ. ಇಲ್ಲಿನ ಕಾವೇರಿ ಮನೆ ಮಗಳಾಗಿ ಬೆಳೆಯುತ್ತಾಳೆ. ಆಕೆ ತಾಳಿ ಕಟ್ಟಿಸಿಕೊಳ್ಳದಿದ್ದರೂ ಹೆಂಡತಿಯಾಗಿ, ಮಕ್ಕಳನ್ನು ಹೇರದಿದ್ದರೂ ತಾಯಿಯಾಗಿ ಕುಟುಂಬವನ್ನು ಪೊರೆಯುವ ಪರಿ ಅನನ್ಯ ಎಂದೇ ನಾನು ಭಾವಿಸಿದ್ದೇನೆ.

★ *ಸುರುಳಿ ಸುತ್ತುವುದರಿಂದ ಏನು ಲಾಭ? ಕಂತುಗಳನ್ನು ನಿಗದಿ ಮಾಡಿ ವೀಕ್ಷಕರ ಮೇಲೆ ಕರುಣೆ ತೋರಿಸಿದರೆ ಒಳಿತಲ್ಲವೇ?*

ಹೌದು. ಕಥೆಯನ್ನು ದಿಕ್ಕು ತಪ್ಪಿಸಿದಾಗ ಎಳೆದಾಟ ಹೆಚ್ಚಾಗಿ ಮೂಲಕಥೆಗೆ ಬಾಧೆಯಾಗುತ್ತದೆ. 'ಕಾವೇರಿ'ಯನ್ನು ಕಥೆ ಜೀವಂತವಾಗಿ ಇರುವ ತನಕ ತಗೆದುಕೊಂಡು ಹೋಗುತ್ತೇವೆ. ನಿರ್ಮಾಪಕಿ ಆರ್.ವಿಜಯಾ ಕೂಡ ಅದರಲ್ಲಿ ಸ್ಪಷ್ಟವಾಗಿದ್ದಾರೆ. ಓಡುತ್ತದೆ ಎಂದು ಲಂಗುಲಗಾಮಿಲ್ಲದೆ ಓಡಿಸುವುದು ಕ್ಷೇಮವಲ್ಲ. ವೀಕ್ಷಕರಿಗೆ ಬೇಸರ ಮೂಡಿಸದಂತೆ ನೋಡಿಕೊಳ್ಳುವುದು ನಮ್ಮ ಜವಾಬ್ದಾರಿ. ಕಥೆಯಲ್ಲಿ ಹೂರಣ ಇರುವ ತನಕ ಒಬ್ಬಟ್ಟು ಬಡಿಸುತ್ತೇವೆ. ಆಮೇಲೆ ಮತ್ತೆ ಬೇರೆಯ ಕಥೆಯನ್ನು ಕೈಗೆತ್ತಿಕೊಳ್ಳುತ್ತೇವೆಯೇ ಹೊರತು ಇದನ್ನು ಎಳೆದಾಡುವುದಿಲ್ಲ.

★ *ಹೊರ ಸಂಬಂಧ ಕಿತ್ತಾಟವನ್ನು ನಿರೂಪಿಸುವ ಪಯತ್ನ ಇದೆಯಾ?*

ಇಲ್ಲ. ಧಾರಾವಾಹಿ ಎಂದರೆ ಅತ್ತೆಯ ಕಿರಿಕ್, ಖಳನಾಯಕಿ, ನಾಯಕನ ವಿವಾಹ ಬಾಹಿರ ಸಂಬಂಧದಂತಹ ಸಿದ್ಧ ಮಾದರಿಯನ್ನು ಮೀರುವುದು ನಮ್ಮ ಮೂಲ ಉದ್ದೇಶ. ಅತ್ತೆ ಸೊಸೆ ಕಿತ್ತಾಟ, ಕಿಚನ್‌ರಾಮನ ಕಥೆ, ಇಲವೇ ಪ್ರೇಮ ನಿರೂಪಣೆಗೆ ಮಾತ್ರ ಸೀಮಿತವಾಗಿಲ್ಲ. ಇಲ್ಲಿ ಪ್ರತಿ ಪಾತ್ರಕ್ಕೂ ಪ್ರಾಮುಖ್ಯತೆ ಇದೆ. ಪ್ರತಿ ಸನ್ನಿವೇಶ ಕೂಡ ಕಥೆಯನ್ನು ಗಟ್ಟಿಗೊಳಿಸುತ್ತಾ ಹೋಗುತ್ತದೆ. ಕುಟುಂಬದ ಎಲ್ಲಾ ಲಕ್ಷಣಗಳು ಇಲ್ಲಿವೆ. ಎಲ್ಲವೂ ಸಹಜವಾಗಿ ಬಂದು ಹೋಗುತ್ತವೆ. ಪ್ರೀತಿ– ತ್ಯಾಗ ತಮಾಷೆ ಎಲ್ಲದರ ನಡುವೆ ಸಂಬಂಧಗಳಿಗೆ ಒಂದು ಮೌಲ್ಯ ಕಲ್ಪಿಸಿದ್ದೇವೆ. ಕಥಾನಾಯಕ ಕೂಡ ಆಗರ್ಭ ಶ್ರೀಮಂತ ಆಗಿದ್ದರೂ ಮನೆಯನ್ನು ತೊರೆದು ಹೊರಬರುತ್ತಾನೆ. ಆ ರಹಸ್ಯವನ್ನು ಬಿಟ್ಟು ಕೊಡುವುದಿಲ್ಲ. ಒಟ್ಟಾರೆ ಸಂಬಂಧಗಳ ಮೌಲ್ಯವನ್ನು ಕಥೆ ಹೆಚ್ಚಿಸುತ್ತದೆ.

ವ್ಯಕ್ತಿಸಹಜ ಭಾವುಕತೆಯನ್ನೂ ನಿರೂಪಿಸಲಾಗುತ್ತಿದೆ. ಮಧ್ಯಂತರದಲ್ಲಿ ವ್ಯಕ್ತಿಯೊಬ್ಬನಿಗೆ ಬೆಸೆದುಕೊಳ್ಳುವ ಸ್ನೇಹ– ಪ್ರೀತಿಯ ಸಂಬಂಧಗಳನ್ನೂ ಕೂಡ ಜೋಪಾನವಾಗಿ ಪೋಷಿಸಿಕೊಂಡು ಹೋಗುವ ಜವಾಬ್ದಾರಿ ಇದೆ. ತುಂಬಾ ಜನರಿಗೆ ಒಡ ಹುಟ್ಟಿದ ಸಹೋದರಿಯರು ಇಲ್ಲದಿರಬಹುದು. ಆದರೆ ಆ ಭಾವ ಸಂಬಂಧವನ್ನು ಬೇರೆಯವರ ಜೊತೆ ಪೋಷಿಸಿಕೊಂಡು ಬರುತ್ತಿರುವುದಕ್ಕೂ ಸಾಕಷ್ಟು ಉದಾಹರಣೆಗಳು ನಮ್ಮ ನಡುವೆ ಇವೆ. ಇಂತಹ ಪ್ರೀತಿ ತುಂಬಿದ ಸಂಬಂಧವನ್ನು ಕಥೆ ಒಳಗೊಂಡಿದೆ. ಬರಿ ಚಪಾತಿಯನ್ನೋ ಅಥವಾ ಬರಿ ಅನ್ನ ಒಂದನ್ನೊ ತಿಂದರೆ ಹೇಗೆ ಊಟ ಆಗುವುದಿಲ್ಲವೋ ಹಾಗೆಯೇ ಕಥೆ ಯಾವುದೋ ಒಂದು ಸೂತ್ರವನ್ನು ಹಿಡಿದರೆ ಆಗುವುದಿಲ್ಲ.

★ *ಕಥೆಗಾರ ನಿರ್ದೇಶಕನಾಗಿದ್ದು ಹೇಗೆ?*

ನಾನು ಆಕಸ್ಮಿಕವಾಗಿ ಕಿರುತೆರೆಗೆ ಪ್ರವೇಶಿಸಿದೆ. ಬಂದಿದ್ದು ಮಾತ್ರ ಲೇಖಕನಾಗಿಯೇ. ಇದು ನನ್ನ ಯೋಜನಾ ಬದ್ಧ ಪ್ರವೇಶವೂ ಅಲ್ಲ. 'ಸಿಲ್ಲಿ ಲಲ್ಲಿ' ನಿರ್ದೇಶಕ ವಿಜಯ ಪ್ರಸಾದ್ ಅವರು ನನಗೆ ಪ್ರೇರೇಪಿಸಿದರು. 'ಮೀರಾ ಮಾಧವ' 'ಪರಿಣಿತ' 'ಗೃಹ ಲಕ್ಷ್ಮಿ'ಯಲ್ಲಿ ಕಥೆ ಬರೆಯುತ್ತಿದ್ದೆ. ಯೋಗರಾಜ್ ಭಟ್ಟರು 'ಪರಮ ಪದ' ಮಾಡುವಾಗ ಅವರ ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡಿದೆ. ಆ ನಂತರ 'ಬಂಗಾರ' ಕಥೆಯ ಜೊತೆ ನಿರ್ದೇಶನವನ್ನೂ ನಾನೇ ಮಾಡಿದೆ. ಅದನ್ನೇ ಇಲ್ಲಿ ಮುಂದುವರಿಸುತ್ತಿದ್ದೇನೆ. ನಿರ್ದೇಶಕನೇ ಕಥೆ– ಚಿತ್ರಕಥೆಯನ್ನು ಮಾಡುವುದರಿಂದ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ಅಲ್ಲದೆ ಕಲ್ಪನೆಗೆ ಬಾಧೆಯಾಗದಂತೆ ವೀಕ್ಷಕರನ್ನು ತಲುಪಬಹುದು ಎನ್ನುವುದು ನನ್ನ ಭಾವನೆ.

★ *ನಿಮ್ಮ ಕಾವೇರಿ ಎಂತಹವಳು?*

ಕಾವೇರಿ ಆದರ್ಶ ಹೆಣ್ಣುಮಗಳು, ಆಕೆಯ ಜೋಡಿ ಸಂತೋಷ್ ಕೂಡ ಅಷ್ಟೇ ಗುಣವಂತ. ಕಾವೇರಿ ಸಮಕಾಲೀನ ಸಂದರ್ಭದ ನೋವುಗಳನ್ನು ಪ್ರತಿನಿಧಿಸುತ್ತಾಳೆ. ಆಕೆ ಬದುಕು ಹೋರಾಟದ ಕಥನ. ಶೀಲ ಎನ್ನುವುದು ದೇಹಕ್ಕೆ ಸಂಬಂಧಿಸಿಲ್ಲ. ಯಾರೂ ಯಾರ ಶೀಲವನ್ನು ಹಾಳುಮಾಡಲು ಸಾಧ್ಯವಿಲ್ಲ ಎನ್ನುವುದನ್ನು ನಿರೂಪಿಸುವುದು ನಮ್ಮ ಸವಾಲು. ಶೋಷಣೆಗೆ ಒಳಗಾಗುವ ಹೆಣ್ಣಿಗೆ ನ್ಯಾಯ ನೀಡುವ ಪಯತ್ನ ಇಲ್ಲಿ ಮಾಡಲಾಗಿದೆ.

★ *ಧಾರಾವಾಹಿಯ ಯಶಸ್ಸು ಯಾರಿಗೆ ಸಿಗುತ್ತದೆ?*

ಕಥೆಯ ನಾಯಕ– ನಾಯಕಿಯರನ್ನು ವೀಕ್ಷಕರು ಮೈದುಂಬಿರುತ್ತಾರೆ. ಕಥೆಯಲ್ಲಿ ಜೀವಂತಿಕೆ ಇದ್ದರೆ ಮಾತ್ರ ಅವರು ತಮ್ಮನ್ನು ಗುರುತಿಸಿಕೊಳ್ಳುತ್ತಾರೆ. ಚಿತ್ರಕಥೆ ಚೆನ್ನಾಗಿದ್ದರೆ ಖಂಡಿತ ಯಶಸ್ಸು ಸಿಗುತ್ತದೆ. ಅದನ್ನು ಅಗೋಚರ ಮೌಲ್ಯಮಾಪನ ಟಿಆರ್‌ಪಿ ಕೂಡ ಮಾನ್ಯ ಮಾಡುತ್ತದೆ. ಒಟ್ಟಾರೆ ಯಾವುದೇ ಧಾರಾವಾಹಿಯ ನಾಯಕನೆಂದರೆ ಕಥೆ. ಅದರ ಚಿತ್ರಕತೆ– ಸಂಭಾಷಣೆಯ ಮೇಲೆ ಅದರ ಯಶಸ್ಸು ನಿರ್ಧಾರವಾಗುತ್ತದೆ.

■ ರಾಗು